|| ಶ್ರೀಹರಿಸರ್ವೋತ್ತಮ ವಾಯುಜೀವೋತ್ತಮ ||

|| ಶ್ರೀಲಕ್ಷ್ಮೀಹಯಗ್ರೀವಾಯ ನಮಃ ||

|| ಶ್ರೀಮಧ್ವರಾಜಗುರುಭ್ಯೋ ನಮಃ ||

|| ಶ್ರೀವಾದಿರಾಜಗುರುಭ್ಯೋ ನಮಃ ||

**ಸುಳಾದಿ – ೧**

ಧ್ರುವತಾಳ

ಹರಿಯೆ ಸರ್ವೋತ್ತಮ ಸಿರಿಯು ಆತನ ರಾಣಿ
ಸರಸಿಜೋದ್ಭವ ಮಾರುತ ಪುತ್ರರಯ್ಯ
ಸರಸ್ವತಿ ಭಾರತಿ ಗರುಡ ಶೇಷ ರುದ್ರ
ಹರಿಯ ರಾಣಿಯರು ನಲ್ಕೆರಡುಮಂದಿ ಸೌ
ಪರಣಿ ವಾರುಣಿ ಗಿರಿಜಾ ಸುರಪತಿ ಕಾಮಾದ್ಯರ
ತಾರತಮ್ಯ ಜ್ಞಾನದಿಂದ ತಿಳಿಯಬೇಕು
ಸುರನದಿ ಪಿತ ನಮ್ಮ **ಮೋಹನ್ನ ವಿಠ್ಠಲನ**
ಶರಣನೆನಿಸಿದವಗೆ ಇನ್ನು ಸರಿಯು ಕಾಣೆ || ೧ ||

**ಮಠ್ಯತಾಳ**

ಜೀವ ಜೀವಕೆ ಭೇದ ಜಡಕೆ ಜಡಕೆ ಭೇದ
ಜೀವ ಜಡಕೆ ಭೇದ ಹರಿಗೆ ಜಡಕೆ ಭೇದ
ಜೀವ ಈಶಗೆ ಭೇದ ದೇವ ನಾರಾಯಣನ
ಭಾವ ಕ್ರಿಯೆಗಳಿಗೆ ಅಭೇದವನ್ನು ತಿಳಿದು
ಶ್ರೀವಲ್ಲಭ ನಮ್ಮ **ಮೋಹನ್ನ ವಿಠ್ಠಲನ**
ಪಾವನ್ನ ಚರಣ ನಾಮತೀವ್ರದಲಿ ಭಜಿಸು || ೨ ||

ತ್ರಿಪುಟತಾಳ

ಹರಿಯು ತನಗೆ ಬೇಕಾದವನ ಮನಸು
ಎರಗಲೀಸನು ಅನ್ಯ ಸತಿಯರಲ್ಲಿ

ಎರಗಿಸಿದರೆ ಬೇಗ ತಿರುಗಿಸುವನಚ್ಯು
ಘರುಗಿಸದಿದ್ದರೆ ಬೆರೆಯಲೀಸ
ಬೆರೆದರೆ ಬೆರೆಯಲಿ ರತಿಯ ಪುಟ್ಟಲೀಸ
ರತಿಪುಟ್ಟಿದರೆ ಏನು ಕಾಕು ಮಾಡಲೀಸನಯ್ಯ
ಕ್ಪರುಣಾಸಾಗರ ನಮ್ಮ **ಮೋಹನ್ನ ವಿಠ್ಠಲ**ಗಿನ್ನು
ಸರಿಗಾಣೆ ರಕ್ಷಿಸುವ ॥ ೩ ॥

ಆಟ್ಟತಾಳ

**ಮಾರುತ ಮತವೊಂದಿ ಹರಿಗೆ ಪರನೆಂದು**
ಗುರುಹಿರಿಯರು ಚರಣಕ್ಕೆರಗು ಆವಾಗಲು
ಹರಿಕಥಾಮೃತವ ಕರ್ನದಿಂದಲಿ ಕೇಳು
ಹರಿ ನಿರ್ಮಾಲ್ಯವ ಶಿರದಲ್ಲಿ ಧರಿಸುತಿರು
ಹರಿನೈವೇದ್ಯವ ಹರುಷದಿ ಭುಂಜಿಸು
ಹರದಾಸರ ಕೂಡೆ ತಿರುಗು ಊಳಿಗನಂತೆ
ಹರಿಯವತಾರ ಸಿರಿ **ಮೋಹನ್ನ ವಿಠ್ಠಲ**
ಹರಿಯೇ ತ್ರಿಭುವನ ಧೊರೆಯೆಂದು ತಿಳಿಯೊ ॥ ೪ ॥

ಆದಿತಾಳ

ತನಗೆ ಬೇಕಾದವನು ಉನ್ನತ ಪಾಪವ ಮಾಡೆ
ದಾನವರಿಗೆ ಕೊಡಿಸಿ ಪುಣ್ಯ ಭಕ್ತರಿಗೀವ
ಘನ್ನ ಮಹಿಮ ಲಕುಮಿಯನ್ನು ಬಿಟ್ಟರೇನು
ಪ್ರ ಪನ್ನರ ಬಿಡನೆಂದು ಚಿನ್ಮಯ ಮೂರುತಿ
ಪನ್ನಗಾದ್ರಿನಿಲಯ, **ಮೊಹನ್ನ ವಿಠ್ಠಲ**ನ್ನ
ಸನ್ನುತಿಸುವನಿಗೆ ಇನ್ನು ಸರಿಯು ಕಾಣೆ

॥ ಶ್ರೀವಾದಿರಜಗುರ್ವಂತರ್ಗತ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

## ಸುಳಾದಿ – ೨

ಧ್ರುವತಾಳ

ಹರಿದಾಸನು ನಾನಲ್ಲ ಹರಿಭಕುತಿ ಎನಗಿಲ್ಲ

ಧರೆಯೊಳು ಒಂದು ವೇಷವ ಧರಿಸಿ ತಿರುಗುವೆನು ನಾನು

ತರುಣಿ ಮಕ್ಕಳು ಸಹೋದರ ಮೊದಲಾದವರ

ಪೊರೆವೆನೆನುತ ಡಂಭ ವಿರಚಿಸಿ ಶರಣನೆಂತೆಂದು

ಕರೆಸಿಕೊಂಬೆನೊ  ಬಹಿರದಲ್ಲಿ ಅನ್ಯರಿಂದಲಿ

ಸಿರಿಪತಿ ನಿನ್ನ ಪಾದ ಸ್ಮರಿಸದಲೆ

ಪರಮ ದಯಾಳು **ಮೋಹನ್ನ ವಿಠ್ಠಲ**ರೇಯ

ಕರಣ ಶುದ್ಧನಗದೆ ತಿರುಗಿದೆ ಪೊಟ್ಟೆಗಾಗಿ ॥ ೧ ॥

**ಮಠ್ಯತಾಳ**

ದೇಶದೇಶಕೆ ಧನದ ಆಸೆಗಾಗಿ ಪೋಗಿ

ಕಾಶಿಗ್ಹೋಗುವೆನೆಂದು ಕಾಸು ಹಣವ ತಂದು

ಈ ಸಂಸಾರಕ್ಕೆ ನಾ ಸಮರ್ಪಿಸಿ

ತೋಷಪಡುವೆ ದುರಿತರಾಶಿಯೆಂದರಿಯದಲೆ

ಭೂಸುರರು ಎನ್ನಾವಾಸದಲ್ಲಿಗೆ ಬರಲು

ಗ್ರಾಸವೀಯದೆ ಅಪಹಾಸಮಾಡುವೆ ನಾನು

ದೋಷವರ್ಜಿತ ನಮ್ಮ **ಮೋಹನ್ನ ವಿಠ್ಠಲ**

ಘಾಸಿಯಾದೆನೊ ಯಮನಪಾಶಕ್ಕೆ  ಗುರಿಯಾಗಿ ॥ ೨ ॥

ತ್ರಿಪುಟತಾಳ

ವಿತ್ತವಿದ್ದವರ ಮನೆಯಲ್ಲಿ ಪೋಗಿ ಕುಳಿತು ಬಲು

ಉತ್ತಮನೆಂದವನ ಸ್ತೋತ್ರವಮಾಡಿ

ಹತ್ತೆಂಟು ಪುಸಿವಾರ್ತೆ ಪೇಳೆ ಅವನು ಈ

ಹೊತ್ತು ಬನ್ನಿರಿಯೆನ್ನ ಹರುಷದಿಂದ
ಹತ್ತೈದು ದೇವತಾರ್ಚನೆಯ ಸಾಮಗ್ರಿಯ
ತತ್ತಳಿಸುವಂತೆ ವಿರಚಿಸುವೆ
ಸುತ್ತ ಧೂಪದೀಪವೆತ್ತಿ ನೈವೇದ್ಯವ
ಹತ್ತಿಲಿರಿಸಿಕೊಂಡು ಮುಸುಕಿಟ್ಟು
ಚಿತ್ತ ಶುದ್ಧವಿಲ್ಲದಲೆ ಬಹಿರದಲ್ಲಿ ಕರ
ವೆತ್ತಿ ಪಿಟಪಿಟಯೆಂದು ತುತಿಸುವೆನೊ
ಮತ್ತೇನು ಮಂತ್ರ ತಂತ್ರ ಬಾರದೆನ್ನೆ
ಹತ್ತಿಲಿ ಸೇರಲೀಸನೊ ಸ್ವೋತ್ತಮರ
ಎತ್ತನೋಡಲು ಎನ್ನ ಹತ್ತಿಲಿ ಹೊದ್ದಿದವರು
ಮುತ್ತಿಕೊಂಡು ಕಾಗೆ ಬಳಗದಂತೆ
ಚಿತ್ತಜನಯ್ಯ **ಮೋಹನ್ನ ವಿಠ್ಠಲ** ನಿನ್ನ
ಭೃತ್ಯನೆನಿಸಿ ಸ್ವಸ್ಥ ಚಿತ್ತದಿಂದರದ್ದೋದೆ ॥ ೩ ॥

ಅಟ್ಟತಾಳ

**ಕಾಮ ಕ್ರೋಧ ಲೋಭ ಮದ ಮತ್ಸರಂಗಳು**
ರೋಮ ರೋಮ ಕೂಪದೊಳು ತುಂಬಿಕೊಂಡು
ಭೂಮಿಸುರ ದೇಹ ಬಂದಿಹದೆಂತೆಂಬ
ಈ ಮಹಾಗರ್ವದಿಂದಾಡುವೆ ಸುಜನರ
ಶ್ರೀಮನೋಹರ ನಿನ್ನ ತಾಮರಸಾಂಘ್ರಿನಿ
ಷ್ಕಾಮದಿಂದಲಿ ಭಜಿಸಿ ಮರೆಪೋಗಲಿಲ್ಲ
ಭೂಮಿ ಭಾರಕನಾಗಿ ತನುವ ಪೊರೆದೆನೈಯ
ನಾಮಾಮೃತವನ್ನು ಪ್ರೇಮದಿ ಸವಿಯದೆ
ಸಾಮಜವರದ **ಮೋಹನ್ನ ವಿಠ್ಠಲ** ಅ
ನಾಮಧೇಯನಾದೆ ಪಾಮರರೊಡಗೂಡಿ ॥ ೪ ॥

**ಆದಿತಾಳ**

ಅನ್ಯರ ಪದಾರ್ಥ ತಂದು ನಿನ್ನ ಮುಂದೆ ರಚಿಸಿದರೆ

ಎನ್ನಗೇನು ಬರುವುದೊ ಬಲು ಪುಣ್ಯವೇನೊ ಆದರಿಂದ

ತನ್ನ ಕರದಿಂದಲಿ ಉದಕವನ್ನು ತಂದು ತುಲಸಿಯಿಂದ

ನಿನ್ನ ಪೂಜೆ ಮಾಡಲು ಪ್ರಸನ್ನನಾಗಿ ಪಾಲಿಸುವಿ

ಮುನ್ನೆ ಒಬ್ಬ ಕುಚೇಲಂಗೆ ಮನ್ನಿಸಿ ಪದವಿಯನಿತ್ತೆ

ನಿನ್ನ ಮಹಿಮೆ ಎಣಿಪರಾರೋ ಘನ್ನಮಹಿಮ **ಮೋ**

**ಹನ್ನ ವಿಠ್ಠಲ**ರೇಯ ಅನ್ಯರಲ್ಲಿ ಪೋಗಿ ಪಾಪಕೊಂಡು ಜರುವೆನೊ ॥ ೫ ॥

॥ ಶ್ರೀವಾದಿರಜಗುರ್ವಂತರ್ಗತ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

**ಹಾಡು —೧**

ರಾಗ ರೇಗುಪ್ತಿ ಝಂಪೆತಾಳ

ಶ್ರೀಮಧ್ವ ಚಿತ್ತಮಂದಿರವೆ ನಿನ್ನಯ ಚರಣ

ತಾಮರಸ ನೆರೆನಂಬಿದೆ ॥ ಪ ॥

ಕಾಮ ಕ್ರೋಧಗಳನ್ನು ಕಡಿದು ನಿನ್ನಯ ದಿವ್ಯ

ನಾಮಾಮೃತವನುಣಿಸೋ ಸ್ವಾಮಿ ॥ ಅ ॥

ಮಾರನ್ನ ಉಪಟಳಕ್ಕಾರದಲೆ ನಾ ಬಲು

ಪೋರಬುದ್ಧಿಯನು ಮಾಡಿ

ಬಾರಿ ಬಾರಿಗೆ ಮನದಿ ಬಯಸಿ ಪರನಾರಿಯರ

ಮೋರೆ ಬಣ್ಣವನೆ ನೋಡಿ

ಆರು ಇಲ್ಲದ ವೇಳೆ ಕಣ್ಣುಸನ್ನೆಯಲವಳ

ಕೋರಿದ್ದು ಇತ್ತು ಕೂಡಿ

ವಾರಿಜನಾಭ ನಿನ್ನಾರಾಧನೆಯ ಮರೆದು

ಧಾರುಣಿಗೆ ಭಾರವಾಗಿ ಅಶನ ಶತ್ರುವಾದೆ ॥ ೧ ॥

ಉಪರಾಗ ಮೊದಲಾದ ದಶಮಿ ದ್ವಾದಶಿ ದಿನದಿ
ಉಪೇಕ್ಷೆಯನು ಮಾಡಿ ಜರಿದೆ
ಉಪಕಾರವೆಂದು ನಿಜವೃತ್ತಿ ಪೇಳಿದರೆನಗೆ
ಅಪಕಾರವೆಂದು ತಿಳಿದೆ
ನಿಪುಣ ನೆನಿಸುವೆನೆಂದು ಅಜ್ಞಾನಿಗಳ ಮುಂದೆ
ತಪವೃದ್ಧರನ್ನು ಜರೆದೆ
ಸ್ವಪನದೊಳಗಾದರೂ ವೈರಾಗ್ಯ ಬಯಸದಲೆ
ಕಪಟ ಮನುಜರೊಳಾಡಿ ನಿನ್ನ ಮರೆದೆನೊ ಸ್ವಾಮಿ ॥ ೨ ॥

ಭೂಸುರರು ಚಂಡಾಲ ಜಾತಿಯೆನ್ನದೆ ಬಲು
ಹೇಸಿಕಿಲ್ಲದಲೆ ತಿರಿವೆ
ಆಶಾಪಾಶಕೆ ಸಿಲುಕಿ ಕಂಡ ಕಂಡಲಿ ತಿಂದು
ದೋಷರಾಶಿಯನು ತರುವೆ
ಆ ಸತೀಸುತರ ಸಲಹುವೆನೆಂದು ಪರಿಪರಿ
ವೇಷವನು ಧರಿಸಿ ಮೆರೆವೆ
ವಾಸುಕೀ ಶಯನ ವಸುದೇವ ತನಯನೆ ನಿನ್ನ
ದಾಸನೆನಿಸದಲೆ ಅಪಹಾಸ ಮಾನವನಾದೆ ॥ ೩ ॥
ಹರಿದಾಸರಲ್ಲಿ ಒಂದರಘಳಿಗೆ ಕುಳಿತರೆ
ಶಿರವ್ಯಾಧಿಯೆಂದ್ಹೇಳುವೆ
ದುರುಳ ದುರ್ವಾರ್ತೆಗಳ ಪೇಳಲು ಹಸಿತೃಷೆಯ
ಮರೆದು ಆಲಿಸಿ ಕೇಳುವೆ
ತರುಣಿ ತರಳರು ಎನ್ನ ಪರಿಪರಿ ಬೈದರೆ
ಪರಮ ಹರುಷವ ತಾಳುವೆ

ಗುರುಹಿರಿಯರೊಂದುತ್ತರವನಾಡಲು ಕೇಳಿ
ಧರಿಸಲಾರದಲೆ ಮತ್ಸರಿಸುವೆನೊ ಅವರೊಳಗೆ ॥ ೪ ॥
ನಾ ಮಾಡಿದಪರಾಧಗಳನೆಣಿಸಿ ಬರೆವುದಕೆ
ಭೂಮಂಡಲವೆ ನೆರೆಸಾಲದೊ
ಸೀಮೆಯೊಳಗುಳ್ಳ ದುರ್ಮತಿಯೆಲ್ಲ ಕೂಡಲು
ಈ ಮತಿಗೆ ಅದು ಪೋಲದೋ
ಹೋಮ ಜಪತಪವು ಇನ್ನೆಷ್ಟು ಮಾಡಲು ಪಾಪ
ಸ್ತೋಮ ಎಂದಿಗೂ ವಾಲದೊ
ಸಾಮಜವರದ **ಮೋಹನ್ನ ವಿಠ್ಠಲ** ನಿನ್ನ
ನಾಮವೊಂದಲ್ಲದೆ ಪ್ರಾಯಶ್ಚಿತ್ತವ ಕಾಣೆ ॥ ೫ ॥

॥ ಶ್ರೀಮೋಹನದಾಸರಂತರ್ಗತ ಶ್ರೀವಿಜಯದಾಸರಂತರ್ಗತ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

## ಮಂಗಳ-೧

ರಾಗ : ಭೈರವಿ ಅಟ್ಟತಾಳ

ಜಯಮಂಗಳ ನಿತ್ಯ ಶುಭಮಂಗಳಂ ॥ ಪ ॥
ಹಾರುವಗೆ ಮರದ ಮೇಲೇರುವಗೆ ಮುದ್ರಿಕೆಯ
ತೋರುವಗೆ ವನಕಿತ್ತು ತೂರುವಗೆ
ಸಾರುವಗೆ ಆರ್ಭಟಿಸಿ ಚೀರುವಗೆ ರಕ್ಕಸರ
ಹೀರುವಗೆ ರಾವಣನ ಮೀರುವಗೆ ॥ ೧ ॥
ಭೀಮನಿಗೆ ರಿಪುಕುಲ ವಿ- ರಾಮನಿಗೆ ಸುಜನಬ್ಧಿ
ಸೋಮನಿಗೆ ಭಕ್ತಜನ ಪ್ರೇಮನಿಗೆ
ಕಾಮನಯ್ಯನ ಪಾದ ತಾಮರಸವನ್ನು ನಿ

ಷ್ಕಾಮದಲಿ ಭಜಿಪ ನಿಸ್ಸೀಮನಿಗೆ ॥ ೨ ॥

ಯತಿಯಾಗಿ ಬಂದವಗೆ ಕ್ಷಿತಿಯೊಳಗೆ ನಿಂದವಗೆ

ಪತಿತರನು ಉದ್ಧರಿಪ ಮತಿವಂತಗೆ

ರತಿಪತಿ ಪಿತ ನಮ್ಮ **ಮೋಹನ್ನ ವಿಠ್ಠಲ**ನ

ಸತತ ಸೇವಿಸುವ ಅಪ್ರತಿಮಹಿಮಗೆ ॥ ೩ ॥

## ಮಂಗಳ - ೨

ರಾಗ ಸೌರಾಷ್ಟ್ರ ಛಾಪುತಾಳ

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥

ಜಯಮಂಗಳಂ ಗಂಗೆಯುಂಗುಷ್ಟದಲಿ ಪಡೆದವಗೆ

ಮಂಗಳಂ ಮಹಭಯನಿವಾರಣನಿಗೆ

ಮಂಗಳಂ ಸಕಲ ಸುಜನೋದಧಿ ತಿಂಗಳಿಗೆ

ಮಂಗಳಂ ಮಹಲಕ್ಷ್ಮಿನರಸಿಂಹಗೆ ॥ ಅ ॥

ವೇದ ತಂದಿತ್ತವಗೆ ಭೂಧಯವ ಪೊತ್ತವಗೆ

ಮೇದಿನಿಯ ಮೊರೆಕೇಳಿ ಕಯ್ದವನಿಗೆ

ಆದರದಿ ಪ್ರಹ್ಲಾದಗೊಲಿದು ಕಂಭದಿ ಬಂದ

ಮೋದದಾಯಕ ಲಕ್ಷ್ಮೀ ನರಸಿಂಹಗೆ ॥ ೧ ॥

ನೆಲವನು ಅಳೆದವಗೆ ಬಲಿಯನು ತುಳಿದವಗೆ

ಛಲದಿಂದ ಕ್ಷತ್ರಿಯರನಳಿದವನಿಗೆ

ಜಲನಿಧಿಯ ಬಂಧಿಸಿ ಜಾನಕಿಯ ತಂದವಗೆ

ಹಲಧರಾನನುಜ ಗೋವಳರಾಯಗೆ ॥ ೨ ॥

ಉತ್ತಮ ಸತಿಯರ ಸತ್ಯ ಕೆಡಿಸಿದವಗೆ
ಮತ್ತನಾದ ಕಲಿಯ ಕತ್ತರಿಸಿದವಗೆ
ಚಿತ್ತಜ ಪಿತ ನಮ್ಮ **ಮೋಹನ್ನ ವಿಠ್ಠಲ**
ಭಕ್ತರಿಷ್ಟವ ಕೊಡುವ ಭಾಗ್ಯನಿಧಿಗೆ ॥ ೩ ॥

**॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥**